ವನ್ಯ ಮೃಗಗಳ ರಕ್ಷಣೆ ಸರ್ಕಾರದ ಕ್ರಮ.

1589 – ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವನ್ಯ ಮೃಗಗಳ ರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಕರ್ನಾಟಕದ ಅರಣ್ಯ ಪ್ರದೇಶದಲ್ಲಿ ಇರುವ ಹುಲಿಗಳ ಸಂಖ್ಯೆ ಎಷ್ಟು?

ಶ್ರೀ ಈ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):

ಅ) ವನ್ಯ ಪ್ರಾಣಿಗಳ ರಕ್ಷಣೆಗಾಗಿ ಮತ್ತು ಅವುಗಳ ಪರಿಸರವನ್ನು ಕಾಪಾಡಲು ಮತ್ತು ಅಭಿವೃದ್ಧಿಪಡಿಸಲು ಸರ್ಕಾರವು 19 ವನ್ಯ ಧಾಮಗಳನ್ನು ಮತ್ತು 5 ರಾಷ್ಟ್ರೀಯ ಉದ್ಯಾನ ವನಗಳನ್ನು ಘೋಷಿಸಿದೆ. ವನ್ಯಪ್ರಾಣಿ ಸಂರಕ್ಷಣಾ ಕಾಯ್ದೆ 1972 ಮತ್ತು ನಿಯಮಗಳು 1973ರನ್ನು ಜಾರಿಗೊಳಿಸಲಾಗಿದೆ. ಕಾಡು ಪ್ರಾಣಿಗಳನ್ನು ಬೇಟೆಯಾಡುವುದನ್ನು ನಿಯಂತ್ರಿಸಲು ಅರಣ್ಯ ಸಿಬ್ಬಂದಿಗೆ ವೇಗವಾಗಿ ಓಡುವ ವಾಹನಗಳು ಬಂದೂಕು ಮತ್ತು ಮದ್ದು ಮತ್ತು ನಿಸ್ತಂತು ಉಪಕರಣಗಳನ್ನು ಒದಗಿಸಲಾಗಿದೆ. ವನ್ಯ ಪ್ರಾಣಿ ಸಂರಕ್ಷಣೆಗಾಗಿಯೇ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ನೇತೃತ್ವದಲ್ಲಿ ಪ್ರತ್ಯೇಕವಾಗಿ ವನ್ಯ ಪ್ರಾಣಿ ವಿಭಾಗವನ್ನು ತೆರೆಯಲಾಗಿದೆ. ಪ್ರತಿವರ್ಷ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಧನ ಸಹಾಯದಿಂದ ವನ್ಯ ಪ್ರಾಣಿಗಳ ಸಂರಕ್ಷಣೆ ಅವುಗಳ ಪರಿಸರ ಅಭಿವೃದ್ಧಿಗಾಗಿ ಅವುಗಳ ಪರಿಸರ ಅಭಿವೃದ್ಧಿಗಾಗಿ ಕೆಲಸಗಳನ್ನು ಕೈಗೊಳ್ಳಲಾಗುತ್ತಿದೆ.

ಆ) 1989 ರಲ್ಲಿ ನಡೆಸಿದ ಗಣತಿಯ ಪ್ರಕಾರ ರಾಜ್ಯದ ಅರಣ್ಯ ಪ್ರದೇಶದಲ್ಲಿರುವ ಹುಲಿಗಳ ಸಂಖ್ಯೆ : 257.

ಕರ್ನಾಟಕ ಭೂಸೇನೆ ನಿಗಮದ ಉದ್ದೇಶದ ಬಗ್ಗೆ.

1554 - ಶ್ರೀ ಬಿ.ಹೆಚ್, ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಭೂಸೇನೆ ನಿಗಮ ಯಾವಾಗ ಪ್ರಾರಂಭಿಸಲಾಗಿದೆ? ಹಾಗೂ ಯಾವ ಉದ್ದೇಶಗಳಿಗಾಗಿ?

ಆ) ಭೂಸೇನಾ ನಿಗಮಕ್ಕೆ ಸರ್ಕಾರ ವಹಿಸಿರುವ ಕಾರ್ಯಕ್ರಮಗಳೇನು?

ಇ) ಕರ್ನಾಟಕ ಭೂಸೇನಾ ನಿಗಮವು ಮಾಡಿದ ಕೆಲಸಗಳು ಬಹುಮಟ್ಟಿಗೆ ಕಳಪೆಯಾಗಿರುವುದು ನಿಜವೇ?

ಈ) ಕರ್ನಾಟಕ ಭೂಸೇನಾ ನಿಗಮವು ಸ್ಥಾಪನೆಯಾದಂದಿನಿಂದ ಇಲ್ಲಿಯವರೆಗೆ ಆಗಿರುವ ನಷ್ಟವೆಷ್ಟು? (ಪ್ರತಿ ವರ್ಷದ ವಿವರ ಕೊಡಿ) ಮತ್ತು ಕಳೆದ ಮೂರು ವರ್ಷಗಳಿಂದ ಆದ ನಷ್ಟವೆಷ್ಟು?

ಉ) ಭೂಸೇನಾ ನಿಗಮವು ದಿನಗೂಲಿಗಳ ಹೆಸರಿನಲ್ಲಿ ಅಪಾರ ಸಂಖ್ಯೆಯಲ್ಲಿ ನೇಮಿಸಿಕೊಂಡು ರೋಸ್ಟರ್ ಪದ್ಧತಿ ಕೈ ಬಿಟ್ಟಿರುವುದು ನಿಜವೇ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಹಾಗೂ ಪಶುಸಂಗೋಪನ ಸಚಿವರು) :

ಅ) ಕರ್ನಾಟಕ ಭೂಸೇನಾ ನಿಗಮವನ್ನು 1969-70ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ. ಗ್ರಾಮೀಣಾಬಿವೃದ್ಧಿ ಕಾಮಗಾರಿ ಕೆಲಸಗಳನ್ನು ನಿರ್ವಹಿಸುವುದು, ಹಳ್ಳಿಗಳ ನಿರುದ್ಯೋಗಿಗಳಿಗೆ ಕೆಲಸ ಒದಗಿಸುವುದು, ಮಧ್ಯವರ್ತಿ ಗುತ್ತಿಗೆದಾರರನ್ನು ಉಪಯೋಗಿಸದೇ ನೇರವಾಗಿ ಗ್ರಾಮೀಣ ನಿರುದ್ಯೋಗಿಗಳಿಗೆ, ಅರೆ ನಿರುದ್ಯೋಗಿಗಳಿಗೆ ಕೆಲಸ ಒದಗಿಸುವುದು, ವಿವಿಧ

ಕಾಮಗಾರಿಗಳಲ್ಲಿ ಹಳ್ಳಿಗರಿಗೆ ಶಿಕ್ಷಣ ಕೊಡುವುದು ಮುಂತಾದ ಉದ್ದೇಶಗಳನ್ನು ಹೊಂದಿದೆ.

ಆ) ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಮನೆ ಕಟ್ಟಿಸುವುದು ಜನತಾ ಮನೆ ಕಟ್ಟಿಸುವುದು ಅಂಬೇಡ್ಕರ್ ವಸತಿ ಗೃಹ ಕಟ್ಟಿಸುವುದು.

ಸರ್ಕಾರಿ ಇಲಾಖೆಯ ಮತ್ತು ಸರ್ಕಾರಿ ಸ್ವಾಮ್ಯದ ನಿಗಮಗಳು ವಹಿಸಿದ ನಾಗರೀಕ ಕಾಮಗಾರಿಗಳನ್ನು ನಿರ್ವಹಿಸುವುದು.

ಸಣ್ಣ ನೀರಾವರಿ ಮತ್ತು ಏತ ನೀರಾವರಿ ಯೋಜನಾ ಕಾಮಗಾರಿಗಳನ್ನು ನಿರ್ವಹಿಸುವುದು.

ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳು ವಹಿಸಿದ ಕಾಮಗಾರಿಗಳ ನಿರ್ವಹಣೆ.

ಡ್ಯಾನಿಡಾ ಯೋಜನೆಯ ಕಾಮಗಾರಿ ಮತ್ತು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ನಿಗಮದವರು ವಹಿಸಿದ ಕಾಮಗಾರಿಗಳ ನಿರ್ವಹಣೆ ಮುಂತಾದವು.

ಇ) ಇಲ್ಲಾ

ಈ) ಕರ್ನಾಟಕ ಭೂಸೇನಾ ನಿಗಮಕ್ಕೆ 1983-84ನೇ ಸಾಲಿನಲ್ಲಿ ಮಾತ್ರ 24,56 ಲಕ್ಷ ರೂಪಾಯಿಗಳು ನಷ್ಟವಾಗಿರುತ್ತದೆ. ಕಳೆದ ಮೂರು ವರ್ಷಗಳಿಂದ ನಿಗಮಕ್ಕೆ ಯಾವುದೇ ನಷ್ಟವಾಗಿರುವುದಿಲ್ಲ.

ಉ) ಇಲ್ಲಾ.

ಜವಾಹರ್ ರೋಜ್‌ಗಾರ್ ಯೋಜನೆಗೆ ಕೇಂದ್ರದ ಹಣ.

1609 - ಶ್ರೀ ಪಿ.ಜಿ. ಆರ್. ಸಿಂಧ್ಯ (ಕನಕಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ನೇ ಸಾಲಿನಲ್ಲಿ ಜವಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರುವ ಹಣ ಕಡಿಮೆಯಾಗಿದೆಯೇ?

ಆ) ಕಡಿಮೆಯಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಹೌದು

ಆ) ಮೂರನೇ ಮತ್ತು ನಾಲ್ಕನೇ ಕಂತಿನ ಕೇಂದ್ರದ ಪಾಲಿನ ಹಣವನ್ನು ಬಿಡುಗಡೆ ಮಾಡುವಾಗ ಭಾರತ ಸರ್ಕಾರವು ಶೇಕಡಾ 10 ರಷ್ಟನ್ನು ಆರ್ಥಿಕ ಮಿತವ್ಯಯದ ಪ್ರಯುಕ್ತ ಸದರಿ ಯೋಜನೆಯಲ್ಲಿ ಕಡಿತವನ್ನು ಮಾಡಿರುತ್ತದೆ. ಇದಲ್ಲದೆ ಜಿಲ್ಲಾ ಪರಿಷತ್‌ಗಳು ಹಾಗೂ ಡಿ.ಆರ್.ಡಿ.ಎಸ್. ಬೆಂಗಳೂರು ಇವರು 89-90ನೇ ಸಾಲಿನಲ್ಲಿ ಆಹಾರ ಧಾನ್ಯಗಳನ್ನು ಆಯುವ್ಯಯದಲ್ಲಿನ ನಿಗದಿತ ಅನುದಾನಕ್ಕಿಂತ ಹೆಚ್ಚಾಗಿ ಎತ್ತುವಳಿ ಮಾಡಿದುದಕ್ಕಾಗಿ 6.146 ಕೋಟಿ ರೂಪಾಯಿಗಳನ್ನು ಭಾರತ ಸರ್ಕಾರವು ಕಡಿತ ಮಾಡಿರುತ್ತದೆ.